Regd. No. M 1299 SATYAVADI Fonnded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 231 | ಬುಧವಾರ 3—7—46 | ಬಿಡಿ ಪ್ರತಿ 3 ಪೈ

ಐರೋಪ್ಯರ ಪುಂಡಾಟಿಕೆಗೆ ಆಹುತಿ

ಪ್ರಭುತ್ವ ಸುದ್ದಿ

ಬೆಂಗಳೂರು ಜುಲೈ 1 ಎಮಾನ ಧಾಳಿ ಮುಂಜಾಗ್ರತೆ ಕಾನೂನು ಮೈಸೂರು ಮೋಟಾರು ವಾಹನಗಳ ಕಾನೂನು ಮತ್ತು ಪರದೇಶೀಯರ ರಿಜಿಸ್ಟರ್ ಕಾಸೂನು ಇವುಗಳೆಲ್ಲವೂ ರದ್ದಾಗಿದೆ.

ಂ ಂ

ಮ್ಯಾಡ್ರಿಡ್ ಜೂ೯ 29 — ಕುದುರೆ ಮೇಲೆ ಸವಾರಿ ಮಾಡುತ್ತ ಗೂಳೀ ಶಿಕಾರಿ ನಡೆಸಿದ ಒಬ್ಬ ಸ್ತ್ರೀಗೆ 4 ಲಕ್ಷ ರೂ. ದೊರೆಯಿತು.

ಂ ಂ

ಪೂನಾ ಜುಲೈ 1 — ಗಾಂಧೀಜಿಯವರು ಜುಲೈ 12 ರವರೆಗೆ ಪೂನಾದಲ್ಲಿರುತ್ತಾರೆ.

ಪಂ|| ನೆಹರು

ಮುಂಬಯಿ ಜುಲೈ 2 — ಎ.ಐ.ಸಿ.ಸಿ ಅಧಿವೇಶನ ಕಾಲದಲ್ಲಿ ಪಂ|| ನೆಹರು ಅಧ್ಯಕ್ಷ ಪದವಿ ಸ್ವೀಕರಿಸುವರು.

ಭಾರತಕ್ಕೆ ಸ್ವರಾಜ್ಯ

ಬ್ರಿಟನ್ನಿಗೆ ರಷ್ಯಾ ಭೀತಿಯಿರುವುದರಿಂದ

ಕಲ್ಕತ್ತಾ ಜುಲೈ 1 .... 'ಭಾರತ ಸ್ವರಾಜ್ಯವನ್ನು ಹೊಂದೇಹೊಂಡುವುದು. ಬ್ರಿಟನ್ನಿಗೆ ರಷ್ಯಾ ಹೆದರಿಕೆಯಿರುವುದರಿಂ ಸ್ವಾತಂತ್ರ್ಯವೇನಾದರೂ ದೊರೆಯದಿದ್ದರೆ ಭಾರತವು ರಷ್ಯಾವನ್ನು ಆಹ್ವಾನಿಸುವುದು ಎಂಬುದಾಗಿ ಸೂಚ್ಯಸಿದ್ದ ಅಮೆರಿಕ ಗ್ರಂಥಕರ್ತ ಲೂಯಿಫಿಷರ್ ಭೋಜನಕೂಟವೊಂದರಲ್ಲಿ ತಿಳಿಸಿದರು.

ಮಿ|| ಜಿನ್ನಾ

ನವದೆಹಲಿ ಜುಲೈ 1 — ರಾಜ್ಯಾಂಗ ಘಟನಾ ಸಮಿತಿಗೆ ಜಿನ್ನಾರವರು ಪಂಜಾಬ್ ಕ್ಷೇತ್ರದಿಂದ ಉಮೇದುವಾರರಾಗಿರುವರು.

ನ್ಯಾಯವಿಧಾಯಕ ಸಭೆ

ವಿ. ಬಾ.] ಬೆಂಗಳೂರು, ಜುಲೈ 2

ರಾ|| ಪ್ರ|| ಹೆಚ್. ಬಿ. ಗುಂಡಪ್ಪನಗೌಡರ ಅಧ್ಯಕ್ಷತೆಯಲ್ಲಿ ಅಧಿವೇಶನ ಆರಂಭವಾಯಿತು.

ಶ್ರೀ ಹುಚ್ಚೇಗೌಡರ ಪ್ರಶ್ನೆಗೆ ಶ್ರೀ ಪುಲ್ಲಾರೆಡ್ಡಿಯವರು ಉತ್ತರ ಕೊಡುತ್ತಾ 25291 ಎಕ್ರೆ ಮತ್ತು 29 ಗುಂಟೆ ಜಮೀನನ್ನು ಸಾಗುವಳಿಗಾಗಿ ರೈತರಿಗೆ ಕೊಡಲಾಯಿತೆಂದು ತಿಳಿಸಿದರು. ವ್ಯವಸಾಯಾಧಿಕಾರಿಗಳು ಇದರ ಮೇಲ್ವಿಚಾರಕರೆಂದು ಉತ್ತರ ನಿತ್ತರು

ಸೂಪರ್‌ವೆನ್ಷನ್‌ಗಾಗಿ ಶ್ರೀ ಶೇಷಾದ್ರಿಯವರು ರೂ 19856 ರ ಗ್ರಾಂಟು ಸೂಚಿಸಿದರು.

ಭಾರಿ ಗಲಭೆ

ಅಹ್ಮದಾಬಾದ್ ಜುಲೈ 2 — ಕೋಮುವಾರು ಗಲಭೆ ಇಲ್ಲಿ ಭೀಕರವಾಗಿದೆ. ಪೋಲಿಸರು 9 ಸಾರಿ ಗುಂಡು ಹಾರಿಸಿದರು. ಒಟ್ಟು 33 ಮರಣ 250 ಗಾಯಗಳಾಗಿವೆ ಕರ್ಫ್ಯೂ ಜಾರಿಯಾಗಿದೆ. ಮಿಲಿಟರಿ ಸ್ಥಗರವನ್ನು ಕಾಯುತ್ತಿದೆ.

ಕಾಮನ್ಸ್‌ನಲ್ಲಿ ಸರ್ಕಾರದ ಮೇಲೆ ದಾಂಧಲೆ

ಲಂಡನ್ ಜೂ೯ 1 — ಲೇಬರ್ ಸರ್ಕಾರವನ್ನು ಖಂಡಿಸಿ ಪ್ಯಾಲಿಸ್ಟೈನ್ ಸಮಸ್ಯೆ ಚರ್ಚೆಗೆ ಒಂದು ಸಿಲಬಳಿ ಸೂಚನೆಯನ್ನು ಒಬ್ಬ ಲೇಬರ್ ಸದಸ್ಯರಾದ ಸಿಲ್ವರ್‌ಕ್ಯೂರವರು ತಂದಿರುವದು ಸ್ವಾರಸ್ಯವಾಗಿದೆ.

ಡರ್ಬಾಕ್ ಜುಲೈ 1 — ಜೂ೯ 21 ರಲ್ಲಿ ಐರೋಪ್ಯ ಅತ್ಯಾಚಾರಕ್ಕೆ ತುತ್ತಾಗಿ ಚಿಕಿತ್ಸೆ ಹೋದುತ್ತಿದ್ದ ಭಾರತೀಯ ಪೊಲೀಸ್ ಕಾನ್ಸ್‌ಟೆಬರ್ ಕೃಷ್ಣಸ್ವಾಮಿ ಪಿಳ್ಳೆಯು ಆಸ್ಪತ್ರೆಯಲ್ಲಿ ತೀರಿಹೋದನು. ಇವನ ಶವ ಸಂಸ್ಕಾರಕ್ಕೆ ಸಾವಿರಾರು ಭಾರತೀಯರು ಸೇರಿದ್ದರು. ಐರೋಪ್ಯ ಪುಂಡಾಟಿಕೆಗೆ ಮೊದಲನೆ ಆಹುತಿಯಾಯಿತು.

ಅಣು ಬಾಂಬು

ನ್ಯೂ ಯಾರ್ಕ್ ಜುಲೈ 1 — ಈ ದಿವಸ 3-31 ಗಂಟೆಗೆ 'ಸೆವಾಡ' ಹಡಗಿನ ಮೇಲೆ ಅಣು ಬಾಂಬು ಪ್ರಯೋಗ ನಡೆಸಲಾಯಿತು. ಸುತ್ತಲೂ ಇದ್ದ 72 ಹಡಗುಗಳಿಗೆ ಕೂಡಲೇ ಬೆಂಕಿ ಹತ್ತಿಕೊಂಡಿತು. ಬಾಂಬು ಪ್ರಯೋಗಿಸಿದ ವಿಮಾನ ಸುರಿವಾಗಿ ಹಿಂದಿರುಗಿತು. ಸಾವು ನೋವುಗಳೇನೂ ಆಗಲಿಲ್ಲ. ಬಾಂಬು ಬಿದ್ದ 2 ನಿಮಿಷಗಳ ನಂತರ ಸ್ಫೋಟನೆಯಾಯಿತು. ತೆಂಗಿನ ಗಿಡಗಳು ಸಹಾ ಸುರಿವಾಗಿರುವುವು. ನಿರೀಕ್ಷಿಸಿದಷ್ಟು ಫಲ ದೊರೆಯಿಲ್ಲವೆಂದು ವಿಜ್ಞಾನಿಯೊಬ್ಬರ ಅಭಿಪ್ರಾಯ.

ಮತ್ತೊಂದಾವರ್ತಿ ಪ್ರಯೋಗ

ನ್ಯೂ ಪ್ಯಾನ್ಸಿಸ್ಕೋ ಜುಲೈ 2 — ಅಣು ಬಾಂಬು ಪ್ರಯೋಗಕ್ಕೆ ವಿಮಾನವಾಗಿದ್ದ 'ಸಕಾವ' ಎಂಬ ಜಪಾನಿ ಹಡಗು ಪ್ರಯೋಗದಿಂದ ಮುಳುಗಿತು. ಇಪ್ಪತ್ತೊಂದು ದಿವಸಗಳಲ್ಲಿ ನೀರಿನ ಮೇಲೆ ಮತ್ತೆ ಅಣು ಪ್ರಯೋಗವನ್ನು ನಡೆಸಲಾಗುವುದು.

ಪ್ರಪಂಚದ ಚಳುವಳಿ

ಲೈಲಾಪುರ್ ಜುಲೈ 1 — ಸಚಿವ ನಿಯೋಗ ವಿರುದ್ಧ ಪ್ರಪಂಚ ಚಳುವಳಿ ನಡೆಸಲು ಸಿಕ್ಕರ್ಸ್ ಸಿದ್ಧರೆಂದು ಮಾಸ್ಟರ್ ತಾರಾಸಿಂಗನ ಅಧ್ಯಕ್ಷತೆಯಲ್ಲಿ ನಡೆದ ಸಿಕ್ಕರ ರಾಜಕೀಯ ಸಮ್ಮೇಳನದಲ್ಲಿ ತೀರ್ಮಾನವಾಯಿತು.

ಸತ್ಯಗ್ರಹ ಪ್ರಕರಣ

ಪೀಟರ್ ಮಾರೀಟ್ಸ್‌ಬರ್ಗ್ ಜುಲೈ 1 — ಪ್ರತಿಷ್ಠಿತನೆ ಎಷ್ಟೇ ಬಿರುಸಾಗಿದ್ದರೂ ಭಾರತೀಯರನ್ನು ಹದದಲ್ಲಿಡುವ ಶಾಸನವನ್ನು ನಾವು ಜಾರಿ ಮಾಡೇ ಮಾಡುತ್ತೇವೆ, ಎಂಬುದಾಗಿ ಗೃಹ ಮಂತ್ರಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆಗೆ

ಮೈಸೂರು ಜುಲೈ 3 — ಶ್ರೀ ಚಂಗಲರಾಯರೆಡ್ಡಿ ಶ್ರೀ ದಾಸಪ್ಪ ಮತ್ತು ಶ್ರೀಮತಿ ಯಶೋಧರ ದಾಸಪ್ಪ ಇವರುಗಳು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಸೂಚಿತರಾಗಿರುವರು.

ಪಾರ್ಟಿಕೋತ್ಸವ

ಮೈಸೂರು ಜುಲೈ 2 — ನಿನ್ನೆಯ ದಿವಸ ಸ್ಥಳೀಯ ಪುರಸಭೆಯ ಸದಸ್ಯರಾದ ಶ್ರೀ ಎಂ. ಆರ್. ಪಿ. ಬಸಪ್ಪನವರು ತಮ್ಮ ಜ್ಯೂಲಿಟಿ ಸ್ಮೋರ್ಸಿನ ವಾರ್ಷಿಕೋತ್ಸವನ್ನು ವೈಭವದಿಂದ ನಡೆಸಿದರು. ತಮ್ಮ ಕಾರ್ಖಾನೆಯ ಸುಮಾರು 200 ಮಂದಿ ಮಜೂರರಿಗೆ ಬಟ್ಟೆಗಳನ್ನೂ ಮತ್ತು ಹಣ್ಣು ಹಂಪಲಗಳನ್ನೂ ಹಂಚಿದರು. ನಿನ್ನೆಯ ದಿನವು ತಮ್ಮ ಕಾರ್ಖಾನೆಗೆ ರಜಾ ಕೊಟ್ಟಿದ್ದರು.

ಹೊಸಹೊಸ ಸುದ್ದಿ

ಒಟವಿಯಾ ಜುಲೈ 1 ಅಸಹಕರಿಸಲ್ಪಟ್ಟಿದ್ದ ಪಿಸಬ್ಲಿಕ್ ಮಂತ್ರಿ ಇತರರು ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಂ ಂ

ಟ್ರಿಲಂಡರ್ ಜೂ೯ 30 — ಜಪಾನ್ ಫ್ರಾಂಕೋ ಪೋರ್ಚುಗಲ್ಲನ್ನು 150000000 ಡಾಲರ್ ಸಾಲಾ ಕೇಳಿದ್ದಾನೆ.

ಂ ಂ

ಫ್ರಾಂಕೊ ಅಮೆರಿಕಾವನ್ನು 70000000 ಡಾಲರ್ ಸಾಲಾ ಕೇಳಿದ್ದುದು ದೊರೆಯಲಾರದೆಂದು ಯೋಚಿಸಿದ್ದನೆಂದು ಹೇಳಲಾಗಿದೆ. ಬ್ರಿಟನ್ನಿನಿಂದಲೂ ಸಾಲಾ ಸಿಕ್ಕುವಂತಿಲ್ಲ.

ಂ ಂ

ಜರೂಸೆಲಂ ಜೂ೯ 30 — ಬ್ರಿಟಿಷರು ಪ್ಯಾಲಿಸ್ಟೈನಿನಲ್ಲಿ ಧಾಳಿ ನಡೆಸಿ 2000 ಯಹೂದ್ಯರನ್ನು ಖೈದು ಮಾಡಿದ್ದಾರೆ

ಂ ಂ

ಲಂಡನ್ನಿನಿಂದ ಮಾಸ್ಕೊವಿಗೆ ಸರಕಾರದ ಟೆಲಿಫೋನು ಕರೆವಣಿ ಬಾಕಿಯುಳ್ಳಾತರ ನೇಲೂ ಬ್ರಿಟ್ ನಿರ್ಬಂಧ ಹಾಕಿದೆ.

ಂ ಂ

ಲಾಹೋರಿನ ಒಂದು ಗುಜರಾತಿ ಸಂಸಾರದಲ್ಲಿನ 5 ಮಂದಿ ಗಂಡ ಹೆಂಡತಿ 3 ಮಕ್ಕಳು ವಿಷಸೇವನೆಯಿಂದ ಮಡಿದರು.

ಂ ಂ

ರೋಟರ್ ಡಾಂ ಜೂ೯ 29 — ಇಲ್ಲಿ ಬಂದರಿಸಲಾದ 225000 ಬೆಲೆ ಬಾಳುವ ಒಂದು ಚಿನ್ನದ ಗಟ್ಟಿ ತೆಗೆಯಲಾಗಿದೆ. 1940 ರಲ್ಲಿ ಬ್ರಿಟನ್ನಿನ ಡಚ್ ಹಡಗು ತರುತ್ತಿದ್ದ 30 ಗಟ್ಟಿಗಳಲ್ಲಿ ಇದೆಂದು ಹೇಳಲಾಗಿದೆ. ಆ ಹಡಗನ್ನು ಜಪಾನ್ ಬಾಂಬರ್ ಮುಳುಗಿಸಿತು.

ಂ ಂ

ಲಂಡನ್ ಜೂ೯ 30 — 3 ಮಿಲಿಯ ಪೌಂಡುಗಳ ಬೆಲೆಯ ರಸ್ತೆ ಸರಿಮಾಡುವ ರೇಲರುಗಳಿಗೆ ಬ್ರಿಟನ್ನಲ್ಲಿ ಆರ್ಡರ್ ಮಾಡಲಾಗಿದೆ.

ಂ ಂ

ಪ್ಯಾರಿಸ್ ಜೂ೯ 30 — ಚತುರ್ಥ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ನಾಳೆ ಸೇರಿದಾಗ ಒಂದು ಒಪ್ಪಂದಕ್ಕೆ ಬಂದೂ 21 ದೇಶಗಳ ಶಾಂತಿ ಸಮ್ಮೇಳನವು ಶಿಘ್ರದಲ್ಲೇ ನಡೆಯುವಂತೆ ತೀರ್ಮಾನವಾಗುವುದೆಂದು ಹೇಳಲಾಗಿದೆ.

ಕೆ ಂ

ನವದೆಹಲಿ ಜೂ೯ 30 — ನಿಯೋಗ ಕಾರ್ಯ ವಿಫಲ ಚಿಂತೆಯಿಂದ ಲೇಡ್ ಪೆಥಿಕ್ ಲಾರೆನ್ಸರು ತಮ್ಮ ಪದವಿಗೆ ರಾಜೀನಾಮೆ ಕೊಡಬಹುದೆಂದು ಹೇಳಲಾಗಿದೆ.

ಮತ್ತೆ ಯುದ್ಧವೇ

ಪ್ರಪಂಚದಲ್ಲಿ ನಾಗರೀಕ ಜಾತಿಗಳೆಂದು ಹೆಮ್ಮೆ ಪಡುತ್ತಿರುವ ಶ್ವೇತ ಜಾತಿಗಳವರು ಪುನಃ ವತ್ತೊಂದು ಯುದ್ಧಕ್ಕೆ ತಯಾರಿ ಮಾಡುತ್ತಿರುವರು. ಹಿಂದಿನ ಯುದ್ಧದ ವ್ಯವಹಾರವು ಇನ್ನೂ ಮುಗಿಯಲಿಲ್ಲ, ಆಗಲೇ ಬಾಳೇ ಗಿಡದ ಸುಗ್ಗಳಂತೆ ಪೊಸಯುದ್ಧಕ್ಕೆ ಬೀಜಪ ನೆಡಲ್ಪಡುತ್ತಿದೆ. ಬಲ್ಗೇರಿಯಾ ರೊಮೇನಿಯಾ ಮೊದಲಾದ ದೇಶಗಳಲ್ಲಿ ರಷ್ಯದ ಪ್ರೋತ್ಸಾಹದಿಂದ ಕಮ್ಯೂನಿಸ್ಟು ಸರ್ಕಾರವು ಜಾರಿಯಲ್ಲಿ ಬರುತ್ತಿರುವದರಿಂದ ರಷ್ಯದ ಪ್ರಾಬಲ್ಯವು ಹೆಚ್ಚುತ್ತಿರುವೆಂಬ ಭಯವು ಬ್ರಿಟನ್ನು ಅಮೆರಿಕಗಳಿಗೆ ಪೂರ್ಣವಾಗಿ ಉಂಟಾಗಿದೆ ಒಂದು ಕಡೆ ಪರ್ಷ್ಯಾದಲ್ಲಿ ರಷ್ಯನ ಅಧಿಕಾರವು ಸ್ಥಿರವಾಗಿ ನೆಲೆಗೊಂಡು ಬ್ರಿಟನ್ನಿಗೆ ಅವಸರವಾಗಿ ನಮ್ಮ ಭಾತಿಗೆ ಬರಬೇಡಿರೆಂದೂ ಮಂಗಳಾರತಿಗಳು ಆಗುತ್ತಿರುವಾಗ ಮತ್ತೊಂದು ಕಡೆ ಇಟಲಿ ರಾಜನು ಪಿಂಟಸ್ಸನ್ನು ತೆಗೆದುಕೊಂಡು ತನ್ನ ಅಧಿಕಾರವನ್ನು ಪ್ರಜೆಗಳ ಹಸ್ತಗತ ಮಾಡಿದ್ದರಿಂದ ಇಟಲಿಯಲ್ಲಿಯೂ ಕೂಡ ಬ್ರಿಟನ್ನಿಗೆ ಮಾತು ಬರಿಕೆಯು ಕಡಿಮೆಯಾಗುತ್ತಿರುವದೆಂದೇ ತಿಳಿದು ಕೊಳ್ಳಬೇಕಾಗುತ್ತದೆ.

ಇನ್ನು ಸೈಪ್ರಸಿನಲ್ಲಿ ಫ್ರಾಂಕೋ ಸರ್ಕಾರಕ್ಕೆ ರಜಾ ಕೊಡಿಸಲು ರಷ್ಯವು ಪ್ರಯತ್ನಿಸುತ್ತಿರುವಾಗ, ಅಲ್ಲಿಯೂ ರಷ್ಯದ ಪ್ರಾಬಲ್ಯವು ಹೆಚ್ಚುವುದೋ ಏನೋ ಎಂಬ ಭಯದಿಂದ ಅಮೇರಿಕಾವು ಬ್ರಿಟನ್ನಿನ ಪರವಾಗಿಯೇ ತಾಳಹಾಕಲು ಕಾರಣವಿಲ್ಲದೇ ಇಲ್ಲ. ಯೂರೋಪನ್ನಿಲ್ಲವನ್ನೂ ತನ್ನ ಮಾತಿನಂತೆ ನಡೆಸಿಕೊಳ್ಳಬೇಕೆಂದು ರಷ್ಯವು ಪ್ರಯತ್ನಿಸುತ್ತಿರುವುದರಿಂದ, ಯೂರೋಪಿನ ವ್ಯಾಪಾರವು ಕೂಡ ಬಹಳವಾಗಿ ರಷ್ಯಾಪಗೆ ಹೋಗಬಹುದು. ಆದರೆ ಅಮೇರಿಕಾಕ್ಕೆ ಲಾಭವಾಗಲು ಅವಕಾಶವು ಬಹಳ ಕಡಮೆ; ಇಷ್ಟೇ ಅಲ್ಲ. ಈಚೆಗೆ ಯುದ್ಧೋಪಹತಗಳಾದ ಯೂರೋಪವು ದೇಶಗಳೊಂದಿಗೆ ಮಾಡುವ ವ್ಯಾಪಾರಿಂದ ಅಷ್ಟು ಅಧಿಕಲಾಭವು ಬರುವುದಿಲ್ಲವೆಂಬ ಅನುಮಾನವು ಅಮೆರಿಕಕ್ಕೆ ಇದೆ. ಪೂರ್ವ ದೇಶಗಳ ವ್ಯಾಪಾರ ಮಾತ್ರ ಏಕ್ಕಿದೆ. ರಷ್ಯಾವಿಗೆ ಅವಕಾಶವನ್ನಿತ್ತಲ್ಲಿ ಈ ವ್ಯಾಪಾರವನ್ನು ಕೂಡ ಎಲ್ಲಿ ನುಂಗುವದೋ ಎಂದು ಸಾಧ್ಯವಾಗುವವರೆಗೂ ಅದನ್ನು ತಾವೇ ಅನುಭವಿಸಬೇಕೆಂದು ಅಮೆರಿಕಾ ಬ್ರಿಟನ್ನುಗಳು ರಷ್ಯದ ಮೇಲೆ ಪೋಟೀ ಹೋಗುತ್ತಿವೆ. ಅಮೆರಿಕ ಬ್ರಿಟನ್ನಿಗಳಿಗೂ ಪೋಟೀ ಇಲ್ಲದೆ ಇಲ್ಲ. ಇವು ಎರಡೂ ಇಂಗ್ಲೀಷು ಮಾತನಾಡುವ ದೇಶಗಳೂ ಸಗೋತ್ರರೇ ಆದುದರಿಂದ ಅವರೊಳಗೆ ಆವರಿಗೆ ಎಷ್ಟು ಭೇದಗಳಿದ್ದರೂ ಮಗೆರನೆಯ ದೇಶವಾದ ರಷ್ಯದ ಮೇಲೆ ಮಾತ್ರ ಇಬ್ಬರೂ ಕಲೆತು ಒಂದು ಕಾಲಿನ ಮೇಲೆ ನೆಗೆಯುತ್ತಿದ್ದಾರೆ. ಆದುದರಿಂದ ಈ ಪೈಪೋಟಿಯು ಕ್ರಮಕ್ರಮವಾಗಿ ಮೂರನೇ ಯುದ್ಧಕ್ಕೆ ದಾರಿ ತೆಗೆಯಬಹುದೆಂದೂ ರಾಜಕೀಯವೇತ್ತರು ಚರ್ಚಿಲ್‌ರಂಥವರು ಕೂಡ ಅಂದುಕೊಳ್ಳುತ್ತಿದ್ದಾರೆ.



ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವ್ದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಿಯ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪, ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

Get Medical Diplomas

At home : — Ayurvedic Homeopathic, Unani, etc. Prospectus Free.

Old Indian Medical College
Kotgarh, Simla

At Ranjit

2 ನೇ ವಾರ

SHADI

ಪಾತ್ರ—ಮಾಧುರಿ—ನೋತಿಲಾಲ್
ಕುರ್ಚಿದ— ಈಶ್ವರಲಾಲ್

ಶಾದಿ

From 5-7-46

Bahoo Betiyan

Edited, Printed and published by M. S. Krishna Rao, at the Satvavadi Press, Chamaraja Agrahar, Mysore

At Opera

From 26-6-46

COBRA WOMAN

— In Technicolor —

Featuring—

MARIA MONTEZ
JON HALL
MYSORE SABU

Daily 3 Shows

Next Change—"LAVANGI